ಪ್ರತಿಬಿಂಬ

PRATIBIMBA –Multidisciplinary Kannada Research Journal of IIMRD
ISSN: 2582-2284
Vol-3 Issue 5, MAR-APR 2022, Pp. 60-67.
©*IIMRD*, Mysuru
IIMRD JOURNALS
www.iimrd.com

# ಜನಪದ ತ್ರಿಪದಿಗಳಲ್ಲಿ ಹೂವು

**ಡಾ. ಭೀಮರಾಜು***

*ಕನ್ನಡ ಸಹಾಯಕ ಪ್ರಾಧ್ಯಾಪಕರು, ಜೀವ ವಿಜ್ಞಾನ ನಿಕಾಯ (ಎಫ್.ಎಲ್.ಎಸ್), ಜೆಎಸ್‌ಎಸ್ ಉನ್ನತ ಶಿಕ್ಷಣ ಮತ್ತು ಸಂಶೋಧನಾ ಅಕಾಡೆಮಿ, ಶ್ರೀ ಶಿವರಾತ್ರೀಶ್ವರ ನಗರ, ಬನ್ನಿಮಂಟಪ, ಮೈಸೂರು.

**ಸಾರಾಂಶ: (Abstract)**

*ಜಗತ್ತಿನ ಎಲ್ಲಾ ಪ್ರಕಾರದ ಸಾಹಿತ್ಯದ ತಾಯಿ ಬೇರು ಜನಪದವೇ ಆಗಿದೆ. ಆಡು ಮುಟ್ಟದ ಸೊಪ್ಪಿಲ್ಲ ಎಂಬ ಗಾದೆಯ ಮಾತಿನಂತೆ ನಮ್ಮ ಜನಪದರು ಹಾಡಿರದ ಜನಪದ ಸಾಹಿತ್ಯವಿಲ್ಲ ಎಂದೇ ಹೇಳಬೇಕು. ಆಯಾಯ ಕಾಲಮಾನಕ್ಕೆ ತಕ್ಕಂತೆ ತಮ್ಮ ಶ್ರಮದ ಬದುಕನ್ನು ನಿರಾಯಾಸಗೊಳಿಸಿಕೊಳ್ಳಲು ಕಟ್ಟಿ ಹಾಡಿದ ಸಾಹಿತ್ಯವು ಇಂದು ಇಡೀ ನಾಡಿನ ತುಂಬೆಲ್ಲ ಹರಡಿಕೊಂಡಿದೆ. ಅದು ಒಕ್ಕಣೆಯಿಂದ ಮೊದಲುಗೊಂಡು ಬಾಹ್ಯಾಕಾಶದವರೆವಿಗೂ ತನ್ನ ಮಹತ್ವ ಪಡೆದುಕೊಂಡಿದ್ದು ಜನಪದ ಅಡುಗೆ, ಜನಪದವೈದ್ಯ, ಜನಪದವಾದ್ಯ, ದೈವ ಜಾನಪದ, ಮುಸ್ಲಿಂ ಜಾನಪದ, ಕ್ರೈಸ್ತ ಜಾನಪದ, ಹಾಡು, ಒಗಟು, ಲಾವಣಿ, ಸೋಬಾನೆ ಗೀತೆಗಳು... ಹೀಗೆ ಇದರ ವಿಸ್ತಾರ ಬೆಳೆಯುತ್ತಲೇ ಹೋಗುತ್ತದೆ. ಬಿ.ಎಂ.ಶ್ರೀ ರವರ "ಜನವಾಣಿ ಬೇರು ಕವಿವಾಣಿ ಹೂವು" ಎಂಬ ಮಾತು ಸಾಹಿತ್ಯ ರಚನೆಯಲ್ಲಿ ಜನಪದ ಸಾಹಿತ್ಯದ ಪ್ರಾಮುಖ್ಯತೆಯನ್ನು ಸಾರುತ್ತದೆ.*

**ಮುಖ್ಯಪದಗಳು (Keywords):** ಹೂವು, ಜನಪದ ಸಾಹಿತ್ಯ, ಕನ್ನಡ ಸಾಹಿತ್ಯ, ತ್ರಿಪದಿಗಳು.

### ಪೀಠಿಕೆ

ಮಾನವನ ಜನನದಿಂದ ಮೊದಲುಗೊಂಡು ಮರಣದವರೆವಿಗೂ ಜೀವನದ ಪ್ರತಿ ಹಂತದಲ್ಲೂ ಜನಪದ ಹಾಸುಹೊಕ್ಕಾಗಿ ಬೆರೆತುಕೊಂಡಿದೆ. ಈ ಮೊದಲೆ ತಿಳಿಸಿದಂತೆ ವಿಶ್ವವ್ಯಾಪಿಯಾದ ಜನಪದ ಸಾಹಿತ್ಯವು ನಾಡಿನ ಸಮಸ್ತ ಚಿತ್ರಣವನ್ನು ಮೌಖಿಕವಾಗಿಯೇ ಒಬ್ಬರಿಂದ ಒಬ್ಬರಿಗೆ ತಲುಪಿಸುತ್ತಾ ಬಂದಿದೆ. ಕಾಲ, ಸ್ಥಳಗಳು, ಸಂಸ್ಕೃತಿಗಳು ಬದಲಾದಂತೆ ಜನಪದ ಸಾಹಿತ್ಯವೂ ಸಹ ತನ್ನ ನೆಲದ ಸಾಂಸ್ಕೃತಿಕ ಬದುಕಿಗನುಗುಣವಾಗಿ ವಿಭಿನ್ನವಾಗಿ ಬೆಳೆಯತೊಡಗಿತು. ನಂತರದಲ್ಲಿ ಜಾನಪದ ಸಾಹಿತ್ಯದಲ್ಲಿ ಸಮಯ ಸಂದರ್ಭಕ್ಕನುಗುಣವಾಗಿ ಹತ್ತಾರು ಪ್ರಕಾರದ ಸಾಹಿತ್ಯಗಳು ಉಗಮಗೊಂಡವು. ಅವುಗಳ ಒಂದು ಭಾಗವಾಗಿ ತ್ರಿಪದಿ ಸಾಹಿತ್ಯವೂ ಬೆಳಕಿಗೆ ಬಂದಿತು. ಈ ಪ್ರಕಾರದಲ್ಲಿ ನೂರಾರು ತರಹದ ಹಾಡುಗಳನ್ನು ಕಟ್ಟಿ ಹಾಡಿದ ನಮ್ಮ ಹಿರಿಯರು ತಾಯಿ, ತವರು, ಬಡತನ, ಸಿರಿತನ, ಮಳೆ, ಬೇಸಾಯ, ಕೊಯಿಲು, ಒಕ್ಕಣೆಗಳನ್ನು ಮೇಳೈಸಿಕೊಂಡು ಹಾಡುವುದರ ಜೊತೆ ಜೊತೆಗೆ ಹೂವುನ್ನು ಕುರಿತಾಗಿಯೂ ಸಹ ಅನೇಕ ಜನಪದ ತ್ರಿಪದಿ ಸಾಹಿತ್ಯವನ್ನು ರಚಿಸಿ ಹಾಡಿದರು.

*Please cite this article as:* *ಡಾ. ಭೀಮರಾಜು* (2022). ಜನಪದ ತ್ರಿಪದಿಗಳಲ್ಲಿ ಹೂವು. ಪ್ರತಿಬಿಂಬ: *ಮಲ್ಟಿಡಿಸಿಪ್ಲಿನರಿ ಕನ್ನಡ ರೀಸರ್ಚ್ ಜರ್ನಲ್ ಆಫ್ ಐಐಎಂಆರ್‌ಡಿ, 3(5). ಪು.ಸಂ.* 60–67.

ಹೂವು ಎಂದರೆ ಯಾರಿಗೆ ತಾನೆ ಇಷ್ಟವಿಲ್ಲ ಹೇಳಿ. ದೇವರ ಮುಡಿಯಿಂದ ಹೆಂಗೆಳೆಯರ ಜಡೆಯವರೆವಿಗೂ ಇದರ ಹರವು ವಿಸ್ತಾರಗೊಂಡಿರುವುದು ಜಗತ್ತಿಗೆ ತಿಳಿದ ಸಂಗತಿ. ಇಂತಹ ಮಹತ್ವ ಪಡೆದ ಈ ಹೂವು ನಮ್ಮ ಜನಪದರ ಬದುಕಿನಲ್ಲಿಯೂ ಸಹ ಹಾಸುಹೊಕ್ಕಾಗಿ ಬೆರೆತುಹೋಗಿದೆ. ಜಗತ್ತಿನ ಸೃಷ್ಠಿಯಲ್ಲಿ ಸಾವಿರಾರು ಹೂವುಗಳ ಪ್ರಭೇದಗಳಿದ್ದರೂ ನಮಗೆ ತಿಳಿದಿರುವ ಪ್ರಭೇದಗಳು ಕೆಲವು ಮಾತ್ರ. ನಮ್ಮ ಪೂರ್ವಿಕರಿಗೆ ವಿಶೇಷ ಹೂವಿನ ಬಗ್ಗೆ ವಿಶೇಷ ಆಸಕ್ತಿ. ಹೂಗಳ ಸುವಾಸನೆ, ಆಕರ್ಷಣಾಗುಣ, ಹಾಗೂ ಅವುಗಳು ಹೊಂದಿರುವ ಔಷಧೀಯ ಗುಣಗಳಿಂದಾಗಿ ಜನರ ಬದುಕಿನ ಅವಿಭಾಜ್ಯ ಅಂಗವಾಗಿಯೇ ಇದ್ದವು ಎನ್ನಬಹುದು. ಈ ಹೂವುಗಳಲ್ಲಿ ಕೆಲವರಿಗೆ ಮಲ್ಲಿಗೆ ಇಷ್ಟವಾದರೆ, ಕೆಲವರಿಗೆ ಜಾಜಿಮಲ್ಲಿಗೆ ಮತ್ತೆ ಕೆಲವರಿಗೆ ಸೂಜಿಮಲ್ಲಿಗೆ ಇಷ್ಟವಾಗುವುದು ಸಹಜ. ಅಂತೆಯೇ ಹೂವಿನ ವಿಚಾರವಾಗಿ ನಮ್ಮ ಪೂರ್ವಿಕರಿಗೂ ಬೇರೆ ಬೇರೆ ಹೂವುಗಳ ವಿಚಾರವಾಗಿ ಬಿನ್ನಾಭಿಪ್ರಾಯವಿದ್ದರೂ ಸಹ ಕೊನೆಗೆ ಒಂದು ತಾತ್ವಿಕ ನಿಲುವಿಗೆ ಬಂದಂತೆ ಕಾಣುತ್ತದೆ. ಅವರೇ ಹೇಳಿರುವಂತೆ “ಯಾತರದ ಹೂವಾದರೇನು ನಾತರದು ಸಾಲದೆ” ಎಂಬ ಮಾತನ್ನು ಗ್ರಹಿಸಿದಾಗ ಎಲ್ಲಾ ಬಗೆಯ ಹೂಗಳು ಅವರ ಮನಸ್ಸನ್ನು ಸೆಳೆದಿರುವುದಂತು ಸತ್ಯ. ಪ್ರಸ್ತುತ ನಾವು ಮಾತನಾಡುತ್ತಿರುವ ವಸ್ತುವಿಚಾರ ಹೂವು ಎಂದಾದರೂ ಸಹ ಅದು ಎಲ್ಲರಿಗೂ, ಎಲ್ಲಾ ಸಮಯದಲ್ಲು ಒಂದೆಯಾಗಿ ಅಭಿವ್ಯಕ್ತಿಗೊಳ್ಳಬೇಕೆಂದಿಲ್ಲ, ಬದಲಾಗಿ ದೈವತ್ವದ ವಿಚಾರ ಬಂದಾಗ ಹೂವನ್ನು ನೋಡುವ ಬಗೆಗೂ, ಪ್ರೀತಿ ಪ್ರೇಮ, ಅಲಂಕಾರ, ಮೋಜು, ವ್ಯಾಪಾರ, ಸಾವು ಇತ್ಯಾದಿ ವಿಚಾರಗಳು ಬಂದಾಗ ಹೂವನ್ನು ನೋಡುವ ಬಗೆಗೂ ಅನೇಕ ವ್ಯತ್ಯಾಸಗಳನ್ನು ಕಾಣಬಹುದು. ಇದನ್ನು ಗಮನಿಸಿದ ನಮ್ಮ ಡಿ.ವಿ.ಜಿ ರವರು ಈ ಹೂವಿನ ವಿಚಾರವಾಗಿ ಬರೆಯುತ್ತ

***“ಗಿಡದಿ ನಗುತಿರುವ ಹೂ ಪ್ರಕೃತಿಸಖನಿಗೆ ಚೆಂದ***
***ಮಡದಿ ಮುಡಿದಿರುವ ಹೂ ಯುವಕಂಗೆ ಚೆಂದ***
***ಗುಡಿಯೊಳಗೆ ಕೊಡುವ ಹೂ ದೈವಭಕ್ತಂಗೆ ಚಂದ***
***ಬಿಡಿಗಾಸು ಹೂವಾಳಿಗೆ–ಮಂಕುತ್ತಿಮ್ಮ”***

ಎಂದಿದ್ದಾರೆ. ಇಲ್ಲಿ ವಸ್ತುರೂಪದಲ್ಲಿ ಇರುವುದು ಒಂದೆ. ಅದು ಹೂವು. ಆದರೆ ಆದನ್ನು ನೋಡುವ ಬಗೆಗಳು ವಯೋಮಾನಕ್ಕನುಗುಣವಾಗಿ, ಜೀವನದ ಆರ್ಥಿಕ ಪರಿಸ್ಥಿತಿಗನುಗುಣವಾಗಿ ಹೂವನ್ನು ನೋಡಿರುವ ಬಗೆಗಳು ಮಾತ್ರ ಬೇರೆ ಬೇರೆಯಾಗಿ ಕಂಡುಬರುತ್ತವೆ. ಅದರಲ್ಲೂ ನಮ್ಮ ಜನಪದರಿಗೆ ದೇವರು ಎಂದರೆ ಎಲ್ಲಿಲ್ಲದ ಭಯ ಭಕ್ತಿ. ದೈವತ್ವವಿಲ್ಲದೆ ಏನೇನೂ ಇಲ್ಲ ಎಂದು ತಿಳಿದ ಇವರಿಗೆ ಮಿಕ್ಕೆಲ್ಲ ವಿಚಾರಗಳು ಗೌಣವೆಂದೇ ಹೇಳಬಹುದು. ಈ ವಿಚಾರವಾಗಿ ನಮ್ಮ ಜನಪದ ಗರತಿಯ ದೃಷ್ಟಿಕೋನದಲ್ಲಿ ನೋಡುವುದಾದರೆ ಈ ಮುಂದಿನ ತ್ರಿಪದಿ ಸಾಹಿತ್ಯ ಬಲು ಸೂಕ್ತವಾಗಿದೆ.

***“ಹೂವಿನಾಗ ಹುದುಗ್ಯಾನ ಮಾಲ್ಯಾಗ ಮಲಗ್ಯಾನ***
***ಮೊಗ್ಗಾಗ ಕಣ್ಣತೆರದಾನ(ತೆರೆದ)। ಮಾದೆವ್ನ***
***ನೋಡಟಗೆ ನಿದ್ದಿ ಬಯಲಾಗಿ ॥***[1]

[1] ತಳವಾರ ಎನ್.ಎಮ್. (2019). ಪ್ರಬುದ್ಧ ಕರ್ನಾಟಕ. ಸಂಪುಟ 95–96, ಪ್ರಸಾರಾಂಗ, ಮೈಸೂರು ವಿಶ್ವವಿದ್ಯಾಲಯ, ಮೈಸೂರು. ಪು.165.

ಎನ್ನುವಲ್ಲಿ ಅರಳಿ ನಿಂತಿರುವ ಹೂವಿನಲ್ಲಿ ಲಿಂಗಯ್ಯನಿದ್ದಾನೆ ಎನ್ನುವ ಭಾವ ಜನಪದ ಹೆಣ್ಣುಮಗಳದು. ಅಣುರೇಣು ತೃಣಕಾಷ್ಠಗಳಲ್ಲಿ ದೇವರಿದ್ದಾನೆ ಎನ್ನುವ ನಮ್ಮ ಪೂರ್ವಿಕರು ಇಲ್ಲಿಯೂ ಸಹ ತಮ್ಮ ಮನೆ ಹಾಗೂ ಮನದ ಆರಾಧ್ಯವಾಗಿರುವ ಮಾಹಾದೇವನ ಇರುವಿಕೆಯನ್ನು ಹೊಗಳುತ್ತಾ ಹೂವಿನ ಒಳ ಹಾಗೂ ಹೊರ ಮೈಯಲ್ಲಿಯೂ ಅವನಿರುವನು. ಆತನನ್ನು ಕಾಣುವುದೇ ಒಂದು ಸೌಭಾಗ್ಯ, ಆತನನ್ನು ನೋಡಿದಾಗ ಮನದ ಮಂಪರು ದೂರವಾಗಿ ಆ ಜಾಗದಲ್ಲಿ ಚೈತನ್ಯವೆಂಬುದು ಮೂಡುತ್ತದೆ ಎಂಬುದು ಇಲ್ಲಿಯ ಭಾವವಾಗಿದೆ. ಈ ವಿಚಾರವಾಗಿ ಪ್ರಾದೇಶಿಕ ಭಿನ್ನತೆಗಳು ಹಲವುಂಟು. ಅನೇಕ ಸಂಸ್ಕೃತಿಗಳ ನೆಲೆಬೀಡಾದ ಭಾರತದಲ್ಲಿ ವೈವಿಧ್ಯಗಳಿಗೇನು ಕೊರತೆಯಿಲ್ಲ. ಒಂದು ಕಡೆ ಮಾರಿಯನ್ನು ಆರಾದಿಸಿದರೆ ಮತ್ತೊಂದು ಕಡೆ ಮಾಹಾದೇವನ ಆರಾಧನೆಯನ್ನು ಕಾಣಬಹುದು.

***"ಚೆಲ್ಲಿದರು ಮಲ್ಲಿಗೆಯ***
***ಬಾಣ ಸುರೇರಿ ಮ್ಯಾಲೆ***
***ಅಂದಾದ ಚೆಂದಾದ ಮಾಯ್ಕಾರ ಮಾದೆವ್ಗೆ***
***ಚೆಲ್ಲಿದರು ಮಲ್ಲಿಗೆಯ"***

ಎಂದು ಮಹಾದೇವನ ಒಕ್ಕಲಿನ ಜನ ಒಂದು ಕಡೆ ಹಾಡಿದರೆ ಮತ್ತೊಂದು ಕಡೆ ಮಾರಮ್ಮನ ಭಕ್ತರು ತಮ್ಮ ಆರಾಧ್ಯವಾಗಿರುವ ಮಾರಮ್ಮನ್ನು ಆರಾಧಿಸುವ ಬಗೆಯೇ ಬೇರೆ.

***"ಬಾರೆ ದಂಡಿನವ್ವ ಬಂದೆಲ್ಲಿಗೋದಿಯೆ***
***ಮಂದಾಲಿಗಾವೆ ಮಣೆಯಾವೆ । ದಂಡಿನವ್ವ***
***ನೀ ಕೊಟ್ಟ ಕಂದಣ್ಣನವನೆ ತೊಡೆಮ್ಯಾಲೆ.***
***ನಿನ್ ಆರುತಿಗುಮುಡಿಸಿ ಅರಬೆಳ್ಳು ನೊಂದಾವೊ***
***ತಾಯಿ ನಿನ್ನ ಪಾದಾಕ್ಕೆ ಬಗ್ಗಿ । ನಮ್ಗೆ***
***ನಡ ನೊಂದೋ ತಾಯಿ ನಮ್ಗೆ ಶಿರನೊಂದೋ."***

ಇಲ್ಲೆಲ್ಲ ಹೂವು ದೈವದ ಆರಾಧನೆಯ ಸಮಯದಲ್ಲಿ ಬಲು ಪ್ರಮುಖ ಸ್ಥಾನವನ್ನು ಪಡೆದುಕೊಂಡು ಜನಪದರ ತ್ರಿಪದಿ ಹಾಡಿನಲ್ಲಿ ಬೆರೆತುಹೋಗಿರುವುದನ್ನು ಮನಗಾಣಬಹುದು. ಇಂತಹ ಸನ್ನಿವೇಶಗಳನ್ನು ಗಮನಿಸಿದಾಗ ನಮ್ಮ ಆಲೋಚನ ಲಹರಿಗೆ ಮೂಡುವ ಪ್ರಶ್ನೆ ಹೂವಿಗೆ ಏಕಿಷ್ಟು ಮಹತ್ವ ಎಂದು. ಏಕೆಂದರೆ ಹೂವುಗಳು ತಾವು ಪ್ರಕೃತಿದತ್ತವಾಗಿ ಪಡೆದಿರುವ ಸೌಂದರ್ಯ, ಆಕರ್ಷಕ ವಿನ್ಯಾಸ, ಔಷಧೀಯ ಗುಣಗಳು ಹಾಗೂ ಸುವಾಸನೆಯ ಕಾರಣದಿಂದಾಗಿಯೆ ಎಂಬುವುದಂತು ಸತ್ಯ. ಆದ ಕಾರಣದಿಂದಲೇ ಹೂವನ್ನು ಹೋಲಿಕೆ ಮಾಡಿಕೊಂಡು ಹೂವಿನಂತ ಮನಸ್ಸುಳ್ಳವನು, ಹೂಗಾರ, ಸಂಪಿಗೆ ಹೂವಿನಂಗೆ ಇಂಪಾದೋ ನಿನಿ ಪರಿಷೆ ಎಂಬಿತ್ಯಾದಿ ಮಾತುಗಳು ಜನಜನಿತವಾಗುವಂತೆ ಬಳಸುತ್ತಾ ಬಂದಿದ್ದಾರೆ.

"ಪರೋಪಕಾರಂ ಇದಂ ಶರೀರಂ" ಎಂದು ಬದುಕಿದ ಜನಪದರ ಬದುಕಿಗೂ, ಹೊಲಗದ್ದೆಗಳಿಗೆ ಬೆನ್ನು ಮಾಡಿ ಕೇವಲ ಮೊಬೈಲ್ ಪರದೆಯನ್ನು ಮೇಲಿಂದ ಕೆಳಗಡೆಗೆ, ಕೆಳಗಡೆಯಿಂದ ಮೇಲುಗಡೆಗೆ

ಉಜ್ಜುವ ಹಾಗೂ ಕಂಪ್ಯೂಟರ್ ಕೀಬೋರ್ಡಿನ ಮೇಲೆ ಕೈಯಾಡಿಸಿದ ಮಾತ್ರಕ್ಕೇ ನವನಾಗರಿಕ ಸಮಾಜದವರು ನಾವುಗಳು ಎಂದು ಬೀಗುವ ನಮ್ಮಗಳಲ್ಲಿರುವ ಹಲವರ ಬದುಕಿನ ಶೈಲಿಗೂ ಅಜಗಜಾಂತರ ವ್ಯತ್ಯಾಸಗಳನ್ನು ಕಾಣಬಹುದು. ಇಂದು ಜನಕ್ಕೆ ಎಷ್ಟೇ ಉಪಕಾರ ಮಾಡಿದರು ಅದರ ನೆನೆಯುವಿಕೆ ಕಡಿಮೆಯಾಗಿ ಹೋಗಿದೆ. ಎಲ್ಲವನ್ನು ಅನುಮಾನದಿಂದ ನೋಡುವ ವಾತಾವರಣ ನಿರ್ಮಾಣವಾಗಿ ಬಿಟ್ಟಿದೆ. ಕೆಲವು ಉದ್ಯಮಿಪತಿಗಳು ಇತ್ತೀಚಿನ ವರ್ಷಗಳಲ್ಲಿ ನಮ್ಮ ರಾಷ್ಟ್ರೀಕೃತ ಬ್ಯಾಂಕುಗಳಲ್ಲಿ ಕೋಟಿ ಕೋಟಿ  ಹಣವನ್ನು ಸಾಲವಾಗಿ ಪಡೆದು ಪಂಗನಾಮ ಹಾಕಿದರೂ ಬ್ಯಾಂಕಿನವರು ಮಾತ್ರ ಒಂದು ರೂಪಾಯಿ ಪೆನ್ನಿಗೆ ದಾರ ಕಟ್ಟುವುದನ್ನಂತೂ ಬಿಡಲಿಲ್ಲ. ಅಕ್ಷರಸ್ಥ ಸಮಾಜ ಹೀಗಾದರೆ ಹೇಗೆ? ಜನಪದರು ಅನಕ್ಷರ ಕುಕ್ಷಿಗಳಾಗಿದ್ದರೂ ಸಹ ಮಾಡಿದ ಉಪಕಾರವನ್ನು ಮರೆತವರಲ್ಲ. ಸಹಾಯ ಸಣ್ಣದಿರಲಿ ಅಥವಾ ದೊಡ್ಡದಿರಲಿ ಸಹಾಯ ಮಾಡಿದವರನ್ನ ಮನಸಾರೆ ಹರಸಿದ ನೂರಾರು ನಿದರ್ಶನಗಳು ನಮ್ಮೆದುರಿಗುಂಟು.

***ಕಲ್ಲು ಕೊಟ್ಟಮ್ಮಗೆ ಎಲ್ಲ ಭಾಗ್ಯವು ಬರಲಿ***
***ಪಲ್ಲಕ್ಕಿ ಮೇಲೆ ಮಗ ಬರಲಿ । ಆ ಮನೆಗೆ***
***ಮಲ್ಲಿಗೆ ಮುಡಿಯೋ ಸೊಸೆ ಬರಲಿ ॥*** [2]

ಎನ್ನುವಲ್ಲಿ ಜನಪದ ಗರತಿಯೊಬ್ಬಳ ಮನತುಂಬಿದ ಹಾರೈಸುವಿಕೆ ಯಾವ ಮಟ್ಟಿಗೆ ಮೂಡಿ ಬಂದಿದೆ ಎಂದು ತಿಳಿಯಬಹುದು. ಇಲ್ಲಿ ಗಮನಿಸಬೇಕಾದ ಅಂಶ ಏನೆಂದರೆ ಆ ಮನೆಗೆ ಚಿನ್ನ, ಹಣ ಬರಲಿ ಎಂದು ಹೇಳಲಿಲ್ಲ, ಬದಲಿಗೆ ಮಲ್ಲಿಗೆ ಮುಡಿಯೋ ಸೊಸೆ ಬರಲಿ ಎಂದಷ್ಟೇ ಹೇಳಿದ್ದಾರೆ. ಕಾರಣ ಮಲ್ಲಿಗೆ ಸುವಾಸನೆಭರಿತವಾದುದು, ಆಕರ್ಷಣೆಯುಳ್ಳದ್ದು. ಸುಮಂಗಲಿಯ ಸಂಕೇತವೆನಿಸಿದ್ದು, ಫಲದ ಸಂಕೇತ. ಇವೆಲ್ಲವನ್ನು ಅರಿತ ಜನಪದರು ಒಂದು ಕುಟುಂಬದ ಮುನ್ನುಡಿಗಾಗಿ ಆರಿಸಿಕೊಂಡ ಹೋಲಿಕೆ ಎಂತವರಿಗಾದರೂ ಸಂತೋಷ ತಾರದಿರದು. ಸಹಾಯ ಸಣ್ಣದಾದರೂ ಪರವಾಗಿಲ್ಲ ಅದನ್ನು ಸ್ಮರಿಸುವ ಗುಣ ದೊಡ್ಡದಾಗಿರಬೇಕು ಎನ್ನುವುದನ್ನು ಯಾರೂ ಮರೆಯುವಂತಿಲ್ಲ.

ಜನಪದರ ಬದುಕಿನ ಸಂಬಂಧಗಳಲ್ಲಿ ಅಗಾಧವಾದ ನಂಟು ಹೆಣೆದುಕೊಂಡಿರುತ್ತದೆ. ತಂದೆ, ತಾಯಿ, ಅಣ್ಣ ತಮ್ಮ, ಅಕ್ಕ ತಂಗಿ, ಭಾವ ಭಾಮೈದ, ಅತ್ತೆ ಮಾವ, ಸೋದರಿ, ಸೋದರ.......ಹೀಗೆ ಇದು ಮುಗಿಯದ ಪ್ರೀತಿಯ ಬಂಧನದ ಮಾಲೆ. ಇವುಗಳಲ್ಲಿ ತವರು ಮನೆಯ ಮೇಲಿನ ಪ್ರೀತಿ ಅನೇಕ ಕಡೆ ಅನನ್ಯವಾಗಿ ಮೂಡಿ ಬಂದಂತೆ ಗಂಡ ಹೆಂಡರ ನಡುವಿನ ಪ್ರೇಮ, ಮೋಹಕ್ಕೇನೂ ಕಡಿಮೆಯಿಲ್ಲ ಎಂಬಂತೆ ಅಭಿವ್ಯಕ್ತಿಗೊಂಡಿರುವುದನ್ನು ಕಾಣಬಹುದು. ಜನಪದರೇ ಹೇಳಿರುವಂತೆ ಗಂಡ ಹೆಂಡರ ಜಗಳ ಗಂಧ ತೀಡಿದಾಂಗ ಎನ್ನುವ ಮಾತೇ ಒಂದು ರೀತಿಯಲ್ಲಿ ಅಚ್ಚರಿ ಮೂಡಿಸುವ ಮಾತಾಗಿ ಮೂಡಿಬಂದಿರುವಾಗ, ಅವರ ಪ್ರೇಮ ಪ್ರಲಾಪಗಳು ಇನ್ನೆಷ್ಟು ಸೊಗಸಾಗಿರುವುವು ಊಹಿಸಿಕೊಳ್ಳಿ. ಜನಪದರು ಅನಕ್ಷರಸ್ಥರಿರಬಹುದು ಆದರೆ ದಡ್ಡರಲ್ಲ, ಅರಸಿಕರಂತೂ ಅಲ್ಲವೇ ಅಲ್ಲ. ಜನಪದರ ಹಾಸ್ಯಪ್ರಜ್ಞೆಗೆ ರಸಿಕನುಡಿಗಳಿಗೆ ಸಾವಿರಾರು ಉದಾಹಾರಣೆಗಳನ್ನು ನೀಡಬಹುದು. ಅದರಲ್ಲು ಮದುವೆಯ ಸಂದರ್ಭ ಹಾಗೂ ಮದುವೆಯಾದ ಹೊಸತರಲ್ಲು ಗಂಡು ಹೆಣ್ಣುಗಳ ಓಡಾಟ, ಸಡಗರ ಸಂಭ್ರಮಕ್ಕೇನು ಕೊರತೆಯೇ? ಸದಾಕಾಲವೂ ಕ್ರೌಂಚ

[2] ಹಲಸಂಗಿ ಗೆಳೆಯರು. (2005). ಗರತಿಯ ಹಾಡು. ಕನ್ನಡ ಸಾಹಿತ್ಯ ಪರಿಷತ್ತು, ಬೆಂಗಳೂರು. ಪು.105.

ಪಕ್ಷಿಗಳಂತೆ ಪ್ರೇಮ ಪ್ರಣಯ, ಸರಸ ಸಲ್ಲಾಪದಲ್ಲಿರುವ ಕಾಲವದು. ಇಂತಹ ಸನ್ನಿವೇಶಗಳನ್ನು ನೋಡಿದ ನಮ್ಮ ಹಿರಿಯರು ಅವರುಗಳ ವಿರಹವೇದನೆಯನ್ನು ನೆನೆದು ಗಂಡನಾದವನೊಬ್ಬ ತನ್ನ ಮಡದಿಯು ತವರಿಗೋ, ನೆಂಟರಿಷ್ಟರ ಮನೆಗೋ ಹೋಗುವೆನೆಂದು ನುಡಿದಾಗಲಂತು ಅವನ ಮನೋವೇದನೆ ಹೇಳತೀರದಂತಿರುವುದನ್ನು ಕಟ್ಟಿಕೊಡುತ್ತಾ

*ಕಮಲದ ಹೂ ನಿನ್ನ ಕಾಣದೆ ಇರಲಾರೆ*

*ಮಲ್ಲಿಗೆ ಮಾಯ ಬಿಡಲಾರೆ । ಕ್ಯಾದೀಗಿ*

*ಗಿರಿ ನಿನ್ನ ಅಗಲಿ ಇರಲಾರೆ ॥* [3]

ಎನ್ನುವಲ್ಲಿ ಸುವಾಸನೆಯುಕ್ತ ಹೂವುಗಳ ಸಾಲೇ ಗಂಡು ಹೆಣ್ಣುಗಳ ಉಪಮೆಗಳಾಗಿ ಬಂದು ನಿಲ್ಲುತ್ತವೆ. ಗಂಡನಾದವನಿಗೆ ತನ್ನ ಹೆಂಡತಿ ಸುವಾಸನೆ ಬೀರುವ ಪರಿಮಳಯುಕ್ತ ಕಮಲ, ಕೇದಗೆ, ಮಲ್ಲಿಗೆಯಂತೆ ಕಾಣುವುದು ಲೋಕಸತ್ಯವಾಗಿದೆ. ವಿಚಾರ ಹೀಗಿರುವಾಗ ಆಕೆಯ ತಾಯಿಯೇನಾದರೂ ಮಗಳನ್ನು ತವರು ಮನೆಗೆ ಕರೆದರೆ ಹೇಗಿರುತ್ತದೆ ಊಹಿಸಿಕೊಳ್ಳಿ. ಇತ್ತ ಗಂಡನಿಗೆ ಹೆಂಡತಿಯನ್ನು ಬಿಟ್ಟು ಇರಲಾಗದ ಪರಿಸ್ಥಿತಿ ಎದುರಾದಂತೆ ಆಕೆಯ ಮನಸ್ಥಿತಿಯೂ ಸಹ ಅಂತೆಯೇ ಆಗಿರುತ್ತದೆ. ಇಂತಹ ಸಮಯದಲ್ಲಿ ತಾಯಿಗೆ ತನ್ನ ಗಂಡನ ಪ್ರೇಮಮಯ ಮನಸುನ್ನು ತಿಳಿಸುತ್ತ

*ಹಚ್ಚಡದ ಪದರಾಗ ಹಚ್ಚಮಲ್ಲಿಗಿ ಹೂವ*

*ಬಿಚ್ಚಿ ನನಮ್ಯಾಲ ಒಗಿವಂಥ । ರಾಯರನ*

*ಬಿಟ್ಯಾಂಗ ಬರಲೆ ಹಡೆದವ್ವ ॥* [4]

ಹತ್ತಾರು ವರುಷ ಸಾಕಿ ಸಲುಹಿದ ತಂದೆ ತಾಯಿಯನ್ನೇ ಮರೆಸಬಹುದಾದ ಪ್ರೇಮ ಗಂಡನದಾಗಿದೆ ಎಂದರೆ ಅದರ ಸೆಳೆತ ಎಷ್ಟರಮಟ್ಟಿಗೆ ಶಕ್ತಿಶಾಲಿ ನೀವೇ ಊಹಿಸಿಕೊಳ್ಳಿ. ಸಂಸಾರ ಎಂದಮೇಲೆ ಸರಸ ವಿರಸ, ಸುಖ ದುಃಖ, ಬಡತನ ಸಿರಿತನ ಸಾಮಾನ್ಯ. ಕೆಲವೊಮ್ಮೆ ಸಂಸಾರ ನೌಕೆಯ ಪಯಣದಲ್ಲಿ ಸಣ್ಣಪುಟ್ಟ ಜಗಳಗಳಂತು ಸಾಮಾನ್ಯ. ಇವೆಲ್ಲವುಗಳ ನಡುವೆ ಹೆಣ್ಣಾದವಳಿಗೆ ಆಗಾಗ ತವರುಮನೆಯ ನೆನಪು ಕಾಡುವುದು ಸಹಜವೇ ಸರಿ ಇಂತಹ ಸಮಯದಲ್ಲಿ ಆಕೆಯ ಮನೋಧರ್ಮವನ್ನು ನೋಡಿದ ಪ್ರೀತಿಯ ಪತಿರಾಯ ಸಹಧರ್ಮಿಣಿಗೆ ರೇಗಾಡದೆ, ಕೋಪದಿಂದ ಕೂಗಾಡದೆ, ಬೇಸರಿಸಿಕೊಳ್ಳದೆ ಅಕೆಯನ್ನು ಸಮಾಧಾನ ಪಡಿಸುವ ಪರಿಯೇ ತುಂಬ ಸೊಗಸೆನಿಸಿರುವ ಈ ಮಾತುಗಳನ್ನು ಗರತಿಯಾದವಳು ಸ್ಮರಿಸುತ್ತಾ ಅವಳದೇ ಮಾತಿನ ಶೈಲಿಯಲ್ಲಿ ಹೀಗೆಂದಿರುವಳು.

*ಹಾಸಿಗೆ ಹಾಸೆಂದ ಮಲ್ಲಿಗೆ ಮುಡಿಯೆಂದ*

*ಬ್ಯಾಸತ್ತರೆ ಮಡದಿ ಮಲಗೆಂದ । ನನರಾಯ*

*ನನನೋಡಿ ತವರ ಮರೆಯೆಂದ ॥* [5]

[3] ಪೂರ್ವೋಕ್ತ.–2, ಪು.167.

[4] ಅದೇ., ಪು. 167.

ಈ ಮೇಲಿನ ಮಾತುಗಳು ಎಂತಹ ಅರ್ಥಗರ್ಬಿತ ಅನನ್ಯತಾ ಭಾವವನ್ನು ಬದುಕಿನಲ್ಲಿ ಬೆಸೆದುಕೊಂಡಿವೆ ಎಂಬುವುದನ್ನು ಇಂದಿನ ಯುವ ಮನಸ್ಸುಗಳು ಅರಿತುಕೊಳ್ಳಬೇಕಾದ ಅನಿವಾರ್ಯತೆ ಸಹ ಇದೆ. ಏಕೆಂದರೆ ಸುಖ ಸಂಸಾರಕ್ಕೆ ಬೇಕಿರುವುದು ಸರ್ಕಾರಿ ಸಂಬಳವಲ್ಲ, ಬದಲಿಗೆ ಒಬ್ಬರನೊಬ್ಬರು ಅರಿತು ನಡೆಯುವ ಸಮಾನಧರ್ಮದ ಮನಸ್ಸುಗಳು ಹಾಗೂ ಕುಟುಂಬದ ನಿರ್ವಹಣೆಗೆ ಬೇಕಾದ ದುಡಿಮೆ ಸಾಕಲ್ಲವೆ ನೀವೇ ಹೇಳಿ.

ಮೇಲಿನ ಸನ್ನಿವೇಶ ಹೀಗಿರುವಾಗ ತಾಯಿಯಾದವಳು ತನ್ನ ಮಗಳನ್ನು ಮತ್ತೊಂದು ಮನೆ ಬೆಳಗಲು ಕಳುಹಿಸಿದಾಕ್ಷಣ ಮಗಳನ್ನು ಮರೆಯುವುದುಂಟೆ? ಇಲ್ಲ ಹೆತ್ತವ್ವ ಎಂದಿಗೂ ಮಗಳನ್ನು ಮರೆಯಲಾರಳು. ಇಂತಹ ಸನ್ನಿವೇಶ, ಪ್ರಸಂಗಗಳು ನಮ್ಮ ಜನಪದರ ಬದುಕಿನಲ್ಲಿ ನೂರಾರು. ಹಳ್ಳಿ ಜೀವನ ಎಂದ ಮೇಲೆ ಕೊಡುಕೊಳ್ಳುವುದು ಸಾಮಾನ್ಯ. ಅಲ್ಲಿಗೆ ಒಬ್ಬ ಬಳೆಗಾರನಾದಿಯಾಗಿ ಎಲೆ ಪುಟ್ಟಿಯವರು, ಮಡಕೆ ಮಾರುವವರು, ಬಟ್ಟೆ ಮಾರುವವರು, ಹೂವು ಮಾರುವವರ ಬರುವಿಕೆಗೇನು ಕೊರತೆಯಿಲ್ಲ. ಇಂತಹ ಸನ್ನಿವೇಶದಲ್ಲಿ ಅಲಂಕಾರಿಕ ವಸ್ತುಗಳನ್ನೋ, ಬಟ್ಟೆಬರಿಗಳನ್ನೋ ಮಾರುವವರು ಬಂದಾಗ ಹತ್ತವಳ ಗಮನ ಏನಿದ್ದರೂ ತನ್ನ ಮಗಳ ಮೇಲೆ ವಾಲದಿರದು. ವಾಡಿಕೆಯಂತೆ ಹೂಗಾರನೊಬ್ಬ ಹಳ್ಳಿಪರಿಸರದಲ್ಲಿ ಹೂವು ಮಾರಲು ಬಂದಾಗ ಗಂಡನ ಮನೆಯಲ್ಲಿರುವ ತನ್ನ ಮುದ್ದು ಮಗಳನ್ನು ನೆನೆದ ತಾಯೊಬ್ಬಳು

***ಹೂವು ಮಾರುವ ಗೊಲ್ಲ ಹೂವ್ಯಾಕೆ ಇಲ್ ತಂದ್ಯೋ***
***ಹೂ ಮುಡಿಯೋ ಮಗಳು ಮನೆಯಲಿಲ್ಲ । ಅವಳು***
***ಗಂಡನ ಮನೆಗೆ ನಡೆದಾಳು*** ॥[6]

ಎಂದು ಹೇಳುವುದರೊಂದಿಗೆ ತನ್ನ ಮಗಳ ಗುಣಗಾನ ಮಾಡುತ್ತಾ ಮನೆಯಲ್ಲಿದ್ದಾಗ ಆಕೆಯ ಕೆಲಸ ಕಾರ್ಯಗಳ ಬಗ್ಗೆ ಅವಳಿಗಿದ್ದ ಕಾಳಜಿಯನ್ನು ನೆನೆಯುತ್ತ ಅವಳಿಲ್ಲದ ಈ ಕ್ಷಣವನ್ನು ಬೇಸರದಿಂದಲೇ ಕಳಿಯಬೇಕಾದರೂ ಲೋಕರೂಡಿಯಂತೆ ನಡೆಯಬೇಕಾದ ಅನಿವಾರ್ಯತೆಯನ್ನು ನೆನೆದು ಸುಮ್ಮನಾಗುತ್ತಾಳೆ.

ಕೆಲವೊಮ್ಮೆ ಸಂಸಾರದಲ್ಲಿ ಹಣಕಾಸಿನ ಮುಗ್ಗಟ್ಟು ಬರುವುದು ಸರ್ವೆ ಸಾಮಾನ್ಯ. ಆದರೆ ಪರಸ್ಪರರಲ್ಲಿ ಆನುಮಾನ ಬರುವುದು ಸರಿಯಲ್ಲ. ಒಂದುವೇಳೆ ಹೀಗೇನಾದರೂ ಆದರೆ ಆ ಸಂಸಾರ ತೊಂದರೆಗೆ ಸಿಲುಕಬೇಕಾದೀತು. ಗಂಡ ಹೆಂಡರೆಂದಮೇಲೆ ಮೈಮನಗಳ ಆಲಿಂಗನ ನಿತ್ಯನೂತನ, ಸಹಜ ಸುಂದರವೇ ಸರಿ. ಒಂದು ವೇಳೆ ಇವರಿಬ್ಬರಲ್ಲಿ ಈ ವಿಚಾರವಾಗಿ ಯಾರೊಬ್ಬರು ಹಾದಿ ತಪ್ಪಿದರೂ ಆ ಸಂಸಾರ ಬೀದಿಗೆ ಬಿದ್ದಂತೆಯೇ ಸರಿ. ಇಂತಹ ಸನ್ನಿವೇಶಗಳು ಜನಪದರ ಬದುಕಿನಲ್ಲಿ ಇಲ್ಲದಿಲ್ಲ. ಇಂತಹ ಸಂದರ್ಭಗಳನ್ನು ಸೂಕ್ಷ್ಮವಾಗಿ ಬಗೆಹರಿಸಬೇಕು. ಇಲ್ಲವಾದಲ್ಲಿ ಮಾನ ಪ್ರಾಣ ಎರಡರ ಹಾನಿ ತಪ್ಪಿದಲ್ಲ. ಗಂಡ ಹಾದಿ ತಪ್ಪಿದ್ದಾನೆ ಎಂದು ತಿಳಿದು ಬಂದಾಗ ಏನಾದರೂ ಮಾಡಿ ಆತನನ್ನು ಸರಿಮಾಡಬೇಕು ಎಂದು

---

[5] ಉಷಾರಾಣಿ. (2007). ಹೊಂಬಾಳೆ. ಉಲ್ಲಾಸ್ ಪ್ರಕಾಶನ, ಹೊಂಗನೂರು, ಚಾಮರಾಜನಗರ. ಪು.109.

[6] ಪೂರ್ವೋಕ್ತ–2, ಪು.168.

ತೀರ್ಮಾಸಿದ ಹೆಂಡತಿಯಾದವಳು ಆತನ ಸರಸ ಸಲ್ಲಾಪಗಳು ಬೇರೊಬ್ಬ ಹೆಣ್ಣಿನೊಡನೆ ಬೆಸದಿದೆ ಎಂದರಿತ ಆಕೆ ಆತನ ಮನವನ್ನು ತಿದ್ದುವುದೇ ಒಂದು ರೀತಿಯಲ್ಲಿ ಮನಶಾಸ್ತ್ರೀಯವಾಗಿದೆ ಎನ್ನಬಹುದು.

***ಎಲ್ಲಿಗೆ ಹೋಗಿದ್ದೆ ಯಾವ್ಹೂವ ಮುಡಿದ್ದಿದ್ದೆ***
***ಯಾರ ತೋಳಲ್ಲಿ ಒರಗಿದ್ದೆ । ನನರಾಯ***
***ವಲ್ಲಿ–ಸೆರಗೆಲ್ಲ ಪರಿಮಳ ॥*** [7]

ಎಂದು ಪ್ರಶ್ನಿಸುತ್ತ ಆವನ ಮನವನ್ನು ಸರಿದಾರಿಗೆ ತರುವಲ್ಲಿ ಪ್ರಯತ್ನ ಪಡುತ್ತಾಳೆ. ಇನ್ನೂ ಕೆಲವೊಮ್ಮೆ ಬೇರೆ ಬೇರೆ ಪ್ರಸಂಗಗಳಲ್ಲಿ ಕೆಲವು ಗಂಡಸರ ಸಹವಾಸ, ಸಖ್ಯ ಬೆರೊಬ್ಬ ಹೆಣ್ಣಿನೊಡನೆ ಇದೆ ಎಂದು ತಿಳಿದು ಬಂದು ಊರಿನವರ ಬಾಯಿಗೆ ಆಹಾರವಾದ ಸನ್ನಿವೇಶದಲ್ಲಿ ಹೆಂಡತಿಯಾದವಳ ಮನಸ್ಥಿತಿ ಬಾರವಾಗಿರುವುದು ಸಹಜವೆ. ಇಂತಹ ಸನ್ನಿವೇಶಗಳು ಬಂದಾಗಂತು ಹಾದಿ ಬೀದಿಯಲ್ಲಿ ಹಾಡಿಕೊಂಡು ಹಂಗಿಸಿ ನುಡಿಯುವವರಿಗೇನು ಕಡಿಮೆಯೇ? ಇಂತಹ ಪ್ರಸಂಗವೊಂದರಲ್ಲಿ ಜನಪದ ಗರತಿಯನ್ನು ಪ್ರಶ್ನಿಸಿ ಮತ್ತೊಬ್ಬಳು ಮಾತನಾಡಿ ತನ್ನ ಗಂಡನ ಪ್ರರಸ್ತ್ರೀಯ ಸಹವಾಸದ ಬಗ್ಗೆ ಕೇಳಿದಾಗ ಈಕೆ ನೀಡಿದ ಉತ್ತರ ಹೇಗಿತ್ತೆಂದರೆ

***ನಕ್ಕರೆ ನಗಲವ್ವ ನಗೆ ಮುಖದ ಕ್ಯಾದೀಗೆ***
***ನಾ ಮುಟ್ಟಿ ಮುಡಿದ ಪರಿಮಳದ । ಹೂವ***
***ಅವಳೊಂದರಗಳಿಗೆ ಮುಡಿಯಲಿ॥*** [8]

ಹೆಣ್ಣು ಬಡತನ, ಹಸಿವು, ನೋವನ್ನು ತಡೆದಾಳು, ಇವುಗಳೇನು ಆಕೆಗೆ ಹೊಸದೇನಲ್ಲ. ಆದರೆ ಪರಿಸ್ಥಿತಿಯ ಕಠೋರತೆಯನ್ನರಿತ ಆಕೆ ತನಗಾದ ನೋವನ್ನೆಲ್ಲ ನುಂಗಿಕೊಂಡು ಹೊರಜಗತ್ತಿಗೆ ತನ್ನ ನೋವನ್ನು ತೋರದೆ ಬಂದ ಕಷ್ಟಗಳನ್ನೆಲ್ಲ ಮನದಲ್ಲಿಯೇ ಅಡಗಿಸಿಟ್ಟುಕೊಂಡು ಹೊರ ಪ್ರಪಂಚಕ್ಕೆ ಮಾತ್ರ ತನ್ನ ನಗುಮುಖವನ್ನು ತೋರುತ್ತಾ ಬಾಳುತ್ತಾಳೆ. ಈ ಮೇಲಿನ ಸಂದರ್ಭದಲ್ಲಿ ವ್ಯಕ್ತವಾಗಿರುವ ಮಾತುಗಳು ಗಂಡನಾದವನು ಕಚ್ಚೆಯರುಕನಾಗಿ, ಎಲ್ಲೆಂದರಲ್ಲಿ ಹೋಗಲೆಂದಲ್ಲ, ಬದಲಿಗೆ ಸಂಸಾರದ ಗುಟ್ಟು ಉಳಿಸಿ ಮನೆಯ ಮಾನ ಉಳಿಸಬೇಕಾದ ಅನಿವಾರ್ಯತೆಯಿಂದ ಆಕೆ ಈ ಮಾತನ್ನಾಡಿದ್ದಾಳೆ ಎನ್ನುವುದಂತು ಸತ್ಯ.

**ಉಪಸಂಹಾರ**

ಒಟ್ಟಾರೆಯಾಗಿ ಜನಪದರ ಬದುಕಿನಲ್ಲಿ ಸೂರ್ಯ ಚಂದ್ರ, ನೆಲ ಮುಗಿಲು, ದೇವರು ದಿಂಡಿರು, ಆಚಾರ ವಿಚಾರಗಳು ಹಾಸುಹೊಕ್ಕಾಗಿರುವಂತೆ ಹೂವು ಸಹ ಅವರುಗಳ ದೈನಂದಿನ ಬದುಕಿನಲ್ಲಿ ಮಿಳಿತವಾಗಿರುವುದನ್ನು ಈ ಮೇಲಿನ ಎಲ್ಲಾ ಉದಾಹಾರಣೆಗಳ ಮೂಲಕ ಗಮನಿಸಬಹುದು, ಹೂವುಗಳ ಅರಳುವಿಕೆ ನಮ್ಮ ಸಂವೃದ್ಧಿಯ ಸಂಕೇತ. ಒಂದು ವೇಳೆ ಹೂವುಗಳು ಅರಳಿಲ್ಲವಾದರೆ ನಮ್ಮ ಬದುಕು ನರಳುವುದಂತು ಖಚಿತ. ಇದರ ಮಹತ್ವವನ್ನರಿತ ನಮ್ಮ ಹಿರಿಯರು ತಮ್ಮ ಬದುಕಿನ ಅವಿಭಾಜ್ಯ ಅಂಗದಂತೆ

[7] ಪೂರ್ವೋಕ್ತ–6, ಪು.110.
[8] ಅದೇ., ಪು.110

ಹೂವನ್ನು ಪರಿಗಣಿಸಿ ಅದರೊಡನೆ ತಮ್ಮ ಬದುಕನ್ನು ಕಟ್ಟಿದ್ದಾರೆ. ಹುಟ್ಟಿನಿಂದ ಚಟ್ಟದವರೆವಿಗೂ ಇವುಗಳ ಬಳಸುವಿಕೆ ಇರುವುದಂತು ಸತ್ಯ. ಎಲ್ಲಾ ಕಾಲಕ್ಕೂ, ಎಲ್ಲರಿಗೂ ಖುಷಿ ನೀಡುವ ಈ ಹೂವುಗಳು ಭೂರಮೆಗಂತು ಬರಿದಾಗದ ಭೂಷಣವಿದ್ದಂತೆ. ಈ ಎಲ್ಲಾ ವಿಚಾರಗಳಿಂದ ನೋಡಿದಾಗ ಹೂವುಗಳು ನಮ್ಮ ಜನಪದರ ಬದುಕಿನ ಅವಿಭಾಜ್ಯ ಅಂಗವೆಂದೇ ಹೇಳಬಹುದು.

**ಪರಾಮರ್ಶನ ಗ್ರಂಥಗಳು**


- ಉಷಾರಾಣಿ. (2007). ಹೊಂಬಾಳೆ. ಉಲ್ಲಾಸ್ ಪ್ರಕಾಶನ, ಹೊಂಗನೂರು, ಚಾಮರಾಜನಗರ ಜಿಲ್ಲೆ.
- ತಳವಾರ. ಎನ್.ಎಮ್. (2019). ಪ್ರಬುದ್ಧ ಕರ್ನಾಟಕ, ಸಂಪುಟ. 95–96, ಪ್ರಸಾರಾಂಗ, ಮೈಸೂರು.
- ರಾಧ. ಎಚ್. ಎನ್. (2003). ಸೋಬಾನೆ ಬೆಳ್ಳುಳ್ಳಮ್ಮ, ತಳಗವಾದಿ ಪ್ರಕಾಶನ, ಮೈಸೂರು.